**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯ ರವರಿಂದ ನಿಯಮ–72ರ ಅಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾಹಿತಿ ಒದಗಿಸುವ ಕುರಿತು:–**

**ವಿಷಯ:**

ಕರ್ನಾಟಕದಲ್ಲಿ ಸುಮಾರು 75 ರಿಂದ 80 ಲಕ್ಷ ನೇಕಾರ ಕುಟುಂಬಗಳಿದ್ದು 7 ಪ್ರಮುಖ ಜಾತಿ ಹಾಗೂ 49 ಉಪ ಜಾತಿಗಳನ್ನು ಒಳಗೊಂಡಿವೆ. ಪೂರ್ವಕಾಲದಿಂದಲೂ ನೇಕಾರಿಕೆ ವೃತ್ತಿಯಲ್ಲಿ ತೊಡಗಿದ್ದ ಇವರುಗಳು ಬದಲಾದ ಪರಿಸ್ಥಿತಿಯಲ್ಲಿ ಕೈಮಗ್ಗಗಳು ಯಾಂತ್ರೀಕರಣಗೊಂಡ ತರುವಾಯ ಕುಲಕಸುಬನ್ನು ತೊರೆದು ಇತರೆ ಸಣ್ಣಪುಟ್ಟ ಉದ್ಯೋಗಗಳಲ್ಲಿ ತೊಡಗಿಕೊಂಡಿರುತ್ತಾರೆ. ಆರ್ಥಿಕವಾಗಿ ಹಿಂದುಳಿದವರ ಅಭಿವೃದ್ಧಿ ಮತ್ತು ಸ್ವಾವಲಂಬನೆಗಾಗಿ ಈಗಾಗಲೇ ಸರ್ಕಾರ ಪ್ರತ್ಯೇಕ ಜಾತೀವಾರು ಅಭಿವೃದ್ಧಿ ನಿಗಮಗಳನ್ನು ಸ್ಥಾಪನೆ ಮಾಡಿ ಅದರ ಮೂಲಕ ಆಯಾ ವರ್ಗಗಳ ಆರ್ಥಿಕ ಚೈತನ್ಯಕ್ಕೆ ಮತ್ತು ಸ್ವಾವಲಂಬನೆಗೆ ಉತ್ತೇಜನ ನೀಡುತ್ತಿವೆ. ಅದೇ ಮಾದರಿಯಲ್ಲಿ "ನೇಕಾರರ ಅಭಿವೃದ್ಧಿ ನಿಗಮ"ವನ್ನು ಸ್ಥಾಪಿಸಬೇಕೆನ್ನುವ ವಿಚಾರದ ಬಗ್ಗೆ ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಾಸಂಖ್ಯಾತರ ಕಲ್ಯಾಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:–**

1. **ಕೈಮಗ್ಗ ಮತ್ತು ಜವಳಿ ಇಲಾಖೆ:–**

ಕೈಮಗ್ಗ ಮತ್ತು ಜವಳಿ ಇಲಾಖೆಯು 1991–92ನೇ ಸಾಲಿನಿಂದ ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಕೈಮಗ್ಗ ಮತ್ತು ವಿದ್ಯುತ್ ಮಗ್ಗ ಕ್ಷೇತ್ರವನ್ನು ಅಭಿವೃದ್ಧಿಪಡಿಸುವುದು ಹಾಗೂ ಜವಳಿ ಕ್ಷೇತ್ರದಲ್ಲಿ ಬಂಡವಾಳ ಹೂಡುವ ಸಣ್ಣ, ಅತಿ ಸಣ್ಣ, ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳು ಬಂಡವಾಳ ಹೂಡುವುದಕ್ಕೆ ಮತ್ತು ಉದ್ಯೋಗ ಸೃಜನೆಗಾಗಿ ಉತ್ತೇಜಿಸುವುದು ಕೈಮಗ್ಗ ಮತ್ತು ಜವಳಿ ಇಲಾಖೆಯ ಮುಖ್ಯ ಉದ್ದೇಶವಾಗಿರುತ್ತದೆ.

ಕೈಮಗ್ಗ ಮತ್ತು ಜವಳಿ ಇಲಾಖೆಯ ಅಧೀನದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ_ಈ ಎರಡು ನಿಗಮಗಳು ಹಾಗೂ ಕಾವೇರಿ ಹ್ಯಾಂಡ್ ಲೂಮ್ಸ್ ಕಾರ್ಯ ನಿರ್ವಹಿಸುತ್ತಿರುತ್ತವೆ.

2. **ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ:–**

ಈ ಸಂಸ್ಥೆಯು 1975ನೇ ಇಸವಿಯಲ್ಲಿ ಕಂಪನಿ ಕಾಯ್ದೆ 1956ರ ನಿಯಮಾವಳಿಗಳಡಿಯಲ್ಲಿ ಸ್ಥಾಪಿತವಾಗಿದ್ದು, ಈ ಸಂಸ್ಥೆಯಡಿ 9000 ನೇಕಾರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ನಿಗಮದಿಂದ ನೇಕಾರರು ಸಾಂದ್ರತೆ ಇರುವ ಪ್ರದೇಶಗಳಲ್ಲಿ ಯೋಜನಾ ಕೇಂದ್ರ ಸ್ಥಾಪಿಸಿ ಅಲ್ಲಿಂದ ನೇಕಾರರಿಗೆ ಉದ್ಯೋಗ ನೀಡುವ ಸಲುವಾಗಿ ಕಚ್ಚಾ ಸಾಮಾಗ್ರಿ ವಿತರಣೆ ಮಾಡಿ ಅವರಿಂದ ಪಕ್ಕಾ ಮಾಲನ್ನು ಹಿಂಪಡೆದು ಪರಿವರ್ತನಾ ಶುಲ್ಕ ನೀಡಲಾಗುತ್ತಿದೆ.

3. **ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಹಿಂದಿನ ಹೆಸರು ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮ):–**

ಈ ನಿಗಮವು 09.02.1994ರಲ್ಲಿ ಕಂಪನಿ ಕಾಯ್ದೆ 1959ರ ನಿಯಮಾವಳಿಗಳ ಪ್ರಕಾರ ಸ್ಥಾಪನೆಯಾಗಿದ್ದು, ಕಾರ್ಯನಿರ್ವಹಿಸುತ್ತಿದೆ. ಈ ನಿಗಮವು ರಾಜ್ಯದ ವಿದ್ಯಾವಿಕಾಸ ಯೋಜನೆಯಡಿ ಶಿಕ್ಷಣ ಇಲಾಖೆಗೆ ಸಮವಸ್ತ್ರಗಳನ್ನು ನಿಗಮದ ನೊಂದಾಯಿತ ವಿದ್ಯುತ್ ಮಗ್ಗ ಘಟಕಗಳಿಂದ ಉತ್ಪಾದಿಸಿ ಪೂರೈಸಲಾಗುತ್ತಿದೆ. ಈ ನಿಗಮದಡಿ 624 ವಿದ್ಯುತ್ ಮಗ್ಗ ಘಟಕಗಳು ನೊಂದಣಿಯಾಗಿದ್ದು, 29000 ವಿದ್ಯುತ್ ಮಗ್ಗಗಳು ಕಾರ್ಯನಿರ್ವಹಿಸುತ್ತಿವೆ.

.....2

4. <u>ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳ ನಿಯಮಿತ (ಕಾವೇರಿ ಹ್ಯಾಂಡ್ ಲೂಮ್ಸ್)</u>

ಈ ಮಹಾಮಂಡಳವು 29.06.1992ರಲ್ಲಿ ಸ್ಥಾಪಿತವಾಗಿದ್ದು, ಇದರಡಿಯಲ್ಲಿ 400 ಕೈಮಗ್ಗ ನೇಕಾರರ ಸಹಕಾರ ಸಂಘಗಳು ನೊಂದಣಿಯಾಗಿರುತ್ತವೆ. ಈ ಸಂಸ್ಥೆಯಲ್ಲಿ 1000 ಕೈಮಗ್ಗಗಳು ಇರುತ್ತವೆ.

ನೇಕಾರರ ಅಭಿವೃದ್ಧಿಗಾಗಿ ಹಾಗೂ ನೇಕಾರರನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ:-

<u>ರಾಜ್ಯ ಸರ್ಕಾರದ ಕೈಮಗ್ಗ ಕ್ಷೇತ್ರದ ಯೋಜನೆಗಳು</u>

2019-20ನೇ ಸಾಲಿನ ಕೇಂದ್ರ ಸರ್ಕಾರದ 4ನೇ ಕೈಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿ 29377 ಕೈಮಗ್ಗಗಳು ಇರುತ್ತವೆ.

- ಮಾರುಕಟ್ಟೆ ನೆರವು : ಕೈಮಗ್ಗ ಉತ್ಪನ್ನಗಳಿಗೆ 365 ದಿನಗಳಿಗೂ ಶೇ.20ರಷ್ಟು ರಿಬೇಟ್.
- ಎನ್.ಹೆಚ್.ಡಿ.ಸಿ.ಯಿಂದ ಕಚ್ಚಾ ನೂಲು ಖರೀದಿಗೆ ಸಹಾಯಧನ.
- ಆರ್ಥಿಕ ನೆರವು : ಶೇ.1 ಮತ್ತು 3ರ ಬಡ್ಡಿ ದರದಲ್ಲಿ ಸಾಲ, ರೂ.1,00,000/- ಗಳವರೆಗಿನ ಸಾಲ ಮನ್ನಾ ಯೋಜನೆ (ರೂ.103.62 ಕೋಟಿ).
- ಕೈಮಗ್ಗ ವಿಕಾಸ ಯೋಜನೆ : ಶೇ.50ರ ಸಹಾಯಧನದಲ್ಲಿ ಯಂತ್ರೋಪಕರಣಗಳು.
- ಉಣ್ಣೆವಲಯ ಪುನಃಶ್ಚೇತನ : ಮಾರುಕಟ್ಟೆ ವಾಹನ, ಗೋಡೌನ್, ಸಾಮಾನ್ಯ ಸೌಲಭ್ಯ ಕೇಂದ್ರ, ಯಂತ್ರೋಪಕರಣಗಳು.
- ಸಾಮಾಜಿಕ ಸೌಲಭ್ಯ : ಮಿಯವ್ಯಯ ನಿಧಿ ಯೋಜನೆ, ವಿಮಾ ಯೋಜನೆ, ವೈದ್ಯಕೀಯ ವೆಚ್ಚ ಮರುಪಾವತಿ, ಅಧ್ಯಯನ ಪ್ರವಾಸ ಹಾಗೂ ಇತರೆ ಕಲ್ಯಾಣ ಯೋಜನೆಗಳು.
- ಎನ್.ಐ.ಡಿ(NID) ವತಿಯಿಂದ ಸ್ಮಾರ್ಟ್ ಹ್ಯಾಂಡ್ ಲೂಮ್ ಇನ್ನೋವೇಷನ್ ಕೇಂದ್ರ ಸ್ಥಾಪನೆ.

<u>ರಾಜ್ಯ ಸರ್ಕಾರದ ವಿದ್ಯುತ್ ಮಗ್ಗ ವಲಯದ ಪ್ರಮುಖ ಯೋಜನೆಗಳು:-</u>

ರಾಜ್ಯದಲ್ಲಿ 1992-93ರ ಸಮೀಕ್ಷೆಯಂತೆ ಸುಮಾರು 1,20,000 ವಿದ್ಯುತ್ ಮಗ್ಗಗಳಿದ್ದು 3,00,000 ನೇಕಾರರು ಉದ್ಯೋಗದಲ್ಲಿ ತೊಡಗಿದ್ದಾರೆ.

- ವಿದ್ಯುತ್ ರಿಯಾಯಿತಿ : 20 ಹೆಚ್.ಪಿವರೆಗಿನ ವಿದ್ಯುತ್ ಮಗ್ಗ ಘಟಕಗಳಿಗೆ ರೂ.1.25 ರಂತೆ ವಿದ್ಯುತ್ ಒದಗಿಸಲಾಗುತ್ತಿದ್ದು, ಈ ಸೌಲಭ್ಯವನ್ನು 30000 ವಿದ್ಯುತ್ ಮಗ್ಗ ಘಟಕಗಳು ಪಡೆಯುತ್ತಿವೆ.

- ಆರ್ಥಿಕ ನೆರವು : ಶೇ.50ರ ದರದಲ್ಲಿ 2 ವಿದ್ಯುತ್ ಮಗ್ಗ (ರೂ.3.00 ಲಕ್ಷ ಘಟಕ ವೆಚ್ಚ) ಎಲೆಕ್ಟ್ರಾನಿಕ್ ಜಕಾರ್ಡ್ ಗೆ ಸಹಾಯಧನ (ರೂ.4.50 ಲಕ್ಷ ಘಟಕ ವೆಚ್ಚ)

- ಮೂಲಭೂತ ಸೌಲಭ್ಯ: ಎಕ್ಸ್ ಪ್ರೆಸ್ ಫೀಡರ್, ನೇಕಾರರ ಕಾಲೋನಿ ಅಭಿವೃದ್ಧಿ, ಮಿನಿ ಪವರ್ ಲೂಮ್ ಪಾರ್ಕ್, ಸೈಜಿಂಗ್ ಮತ್ತು ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ. ಪವರ್ ಟೆಕ್ಸ್ ಇಂಡಿಯಾ ಯೋಜನೆಗಳು.

.....3

- ನೇಕಾರರ ಅಭಿವೃದ್ಧಿಗಾಗಿ ಕೈಮಗ್ಗ ಉತ್ಪಾದನೆಗಳ ಮಾರಾಟದ ಮೇಲೆ ಶೇ.20 ರಷ್ಟು ರಿಯಾಯಿತಿಯನ್ನು ಸರ್ಕಾರದಿಂದ ನೀಡಲಾಗುತ್ತಿದ್ದು, 2019-20ನೇ ಸಾಲಿನಲ್ಲಿ 81 ಕೈಮಗ್ಗ ಸಹಕಾರ ಸಂಘಗಳಿಗೆ ರೂ.317.00 ಲಕ್ಷಗಳ ರಿಬೇಟ್ ಸಹಾಯಧನವನ್ನು ನೀಡಲಾಗಿದೆ.

- ನೇಕಾರರ ರೂ.1,00,000/- ಗಳವರೆಗಿನ ಸಾಲ ಮನ್ನಾ ಯೋಜನೆ ಅಡಿಯಲ್ಲಿ 196 ಸಹಕಾರ ಸಂಘ/ಸಂಸ್ಥೆಗಳ ನೇಕಾರರಿಗೆ ಇಲ್ಲಿಯವರೆಗೆ ರೂ.3127.00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ.

- ನೇಕಾರರ ಅಭಿವೃದ್ಧಿಗಾಗಿ ವಿದ್ಯುತ್ ರಿಯಾಯಿತಿ ನೀಡುತ್ತಿದ್ದು, ಈ ಸಾಲಿನಲ್ಲಿ 30000 ಘಟಕಗಳಿಗೆ ರೂ.28.00 ಕೋಟಿಗಳನ್ನು ನೀಡಲಾಗಿದೆ.

- ವಸತಿ ವ ಕಾರ್ಯಾಗಾರ ಯೋಜನೆಯಡಿ ವಸತಿ ರಹಿತ ನೇಕಾರರಿಗೆ ವಾಸ ಹಾಗೂ ಮಗ್ಗ ಅಳವಡಿಸಿಕೊಳ್ಳುವ ಸಲುವಾಗಿ ವಸತಿ ಕಾರ್ಯಗಾರ ನಿರ್ಮಿಸಿಕೊಳ್ಳಲು ಸಹಾಯಧನವನ್ನು ನೀಡಲಾಗುತ್ತಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ನೇಕಾರರ ಅಭಿವೃದ್ಧಿಗಾಗಿ ಹಾಗೂ ನೇಕಾರರನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿವುದರಿಂದ ನೇಕಾರರ ಅಭಿವೃದ್ಧಿ ನಿಗಮದ ಸ್ಥಾಪನೆಯ ಅವಶ್ಯಕತೆ ಕಂಡುಬರುವುದಿಲ್ಲ.

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು